ದಿನಾಂಕಃ **30.07.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ **5** ನೇ ಪ್ರತಿವಾದಿ ಪರ ಶ್ರೀ ಯು ಎಸ್ ವಕೀಲರಿಂದಃ-

ನನ್ನ ಮಗ ದಿಃ 23.07.2009 ರಂದು ಜನಿಸಿರುತ್ತಾನೆ. ಕೆಂಚಪ್ಪ ರವರಿಗೆ 4 ಜನ ಮಕ್ಕಳು ಅವರುಗಳೆಂದರೆ ಕೆಂಚಪ್ಪ, ಗೌರಮ್ಮ, ಲಕ್ಷ್ಮಮ್ಮ, ನರಸಿಂಹಪ್ಪ. 2 ನೇ ಪ್ರತಿವಾದಿ ಜೀವಂತ ಇರುತ್ತಾರೆ. 4 ನೇ ಪ್ರತಿವಾದಿಯು ಜೀವಂತವಾಗಿರುತ್ತಾರೆ. 2 ಮತ್ತು 4 ನೇ ಪ್ರತಿವಾದಿಗೆ ಹೊರಡಿಸಿರುವ ಸಮನ್ಸ್‌ನಲ್ಲಿ 2 ಮತ್ತು 4 ನೇ ಪ್ರತಿವಾದಿಗಳು ಮರಣ ಹೊಂದಿರುತ್ತಾರೆ ಎಂಬ ಷರಾ ದೊಂದಿಗೆ ವಾಪಸ್ಸಾಗಿರುತ್ತದೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ದಿಃ 21.09.2002 ರಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನ್ನ ದಾವೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಮೃತ ನರಸಿಂಹಪ್ಪ ರವರ ಮದುವೆ 2005 ರಲ್ಲಿ ನಡೆದಿರುತ್ತದೆ. ಮದುವೆಯು ಕಲ್ಲತ್ತಿಗಿರಿಯಲ್ಲಿ ನಡೆದಿರುತ್ತದೆ. ಮದುವೆಯಾದ ಬಗ್ಗೆ ನನ್ನ ಬಳಿ ದಾಖಲಾತಿ ಇರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಜೀವನಾಂಶ ಕೋರಿ ನನ್ನ ಗಂಡನ ವಿರುದ್ಧ ಕ್ರಿಮಿನಲ್ ಮಿಸ್ ಸಂಖ್ಯೆ 187ಃ2011 ರಂತೆ ದಾಖಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನರಸಿಂಹಪ್ಪ ರವರು ಹಾಜರಾಗಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನರಸಿಂಹಪ್ಪ ರವರು ನನ್ನನ್ನು ಮದುವೆ ಆಗಿರುವುದಿಲ್ಲ ಎಂದು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯು ನರಸಿಂಹಪ್ಪ ರವರ ಮಗ ಅಲ್ಲಾ ಎಂದು ಅವರು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಪ್ರಕರಣದಲ್ಲಿ ನನ್ನ ಮಗನ ಡಿ ಎನ್ ಎ ಪರೀಕ್ಷೆಗೆ ಆದೇಶವಾಗಿತ್ತು ಎಂದರೆ ಸರಿ. ಆದೇಶವಾಗಿದ್ದರೂ ಸಹ ನಾನು ನನ್ನ ಮಗನನ್ನು ಕರೆದುಕೊಂಡು ಬಂದು ಪರೀಕ್ಷೆಗೆ ಸಹಕರಿಸಿರುವುದಿಲ್ಲ ಎಂದರೆ ಸಾಕ್ಷಿಯು ಅಷ್ಟರಲ್ಲಿ ನರಸಿಂಹಪ್ಪ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನರಸಿಂಹಪ್ಪ ರವರು ಮರಣ ಹೊಂದು 6-7 ತಿಂಗಳ ಹಿಂದೆಯೇ ಡಿ ಎನ್ ಎ ಪರೀಕ್ಷೆಗೆ ಹಾಜರಾಗಿದ್ದರೂ ನಾನು ಡಿ ಎನ್ ಎ ಪರೀಕ್ಷೆಗೆ ಸಹಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಡಿ ಎನ್ ಎ ಪರೀಕ್ಷೆ ಮಾಡಿದರೆ ನಿಜಾಂಶ ತಿಳಿಯುತ್ತದೆ ಎಂದು ನಾನು ಡಿ ಎನ್ ಎ ಪರೀಕ್ಷೆಗೆ ಸಹಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಹೇಮಂತ ಕುಮಾರ್ ಮೃತ ನರಸಿಂಹಪ್ಪನ ಮಗ ಅಲ್ಲಾ ಎಂದರೆ ಸರಿಯಲ್ಲ. ನನಗೆ ಮತ್ತು ನರಸಿಂಹಪ್ಪ ರವರಿಗೆ ಮದುವೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನರಸಿಂಹಪ್ಪ ರವರಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನೂ ಸಹ ನರಸಿಂಹಪ್ಪ ರವರಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನರಸಿಂಹಪ್ಪ ರವರ ಮಗಳ ಹೆಸರು ಲತಾಮಣಿ. ಅವರು ಈಗ ಇರುತ್ತಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಕೆಂಚಪ್ಪ ರವರಿಗೆ ಎಲ್ಲೆಲ್ಲಿ ಆಸ್ತಿ ಇತ್ತು ಎಂದು ನನಗೆ ಗೊತ್ತು. ಅವರಿಗೆ ಮನೆ ಮತ್ತು ಹಿತ್ತಲು ಇತ್ತು. ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಮೃತ ಕೆಂಚಪ್ಪ ರವರಿಗೆ ಇದ್ದ ಆಸ್ತಿಗಳ ಬಗ್ಗೆ ದಾವಾ ಹಾಕುವ ಪೂರ್ವದಲ್ಲೇ ನನಗೆ ಮಾಹಿತಿ ಇತ್ತು ಎಂದರೆ ಸರಿ. 5 ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. 2002 ನೇ ಸಾಲಿನಲ್ಲಿ ಮಾರಾಟವಾದ ಆಸ್ತಿಗೆ 2021 ನೇ ಸಾಲಿನಲ್ಲಿ ದಾವೆ ಹೂಡಲು ಅವಕಾಶ ಇಲ್ಲಾ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ವಾದಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಗಳ ಕುಟುಂಬದಲ್ಲಿ ದಿಃ 21.01.2008 ರಲ್ಲಿ ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಯಾವತ್ತಿಗೂ ಸಹ ಮೃತ ನರಸಿಂಹಪ್ಪ ರವರನ್ನು ಮದುವೆಯಾಗಿ ಸಾಂಸಾರಿಕ ಜೀವನ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ಹೆಸರು ನರಸಿಂಹಪ್ಪ ರವರ ಪಡಿತರ ಚೀಟಿಯಲ್ಲಿ ಇರಲಿಲ್ಲ ಎಂದರೆ ಅದನ್ನು ಅವರು ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿಯು ಮೃತ ಕೆಂಚಪ್ಪ ರವರ ಕುಟುಂಬದ ಸದಸ್ಯರಾಗಿರದ ಕಾರಣ ಈ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲಾ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ಆದ ಕ್ರಯಪತ್ರವನ್ನು ರದ್ದುಪಡಿಸುವಂತೆ 5 ನೇ ಪ್ರತಿವಾದಿ ಬಳಿ ಊರಿನಲ್ಲಿ ಹಲವಾರು ಬಾರಿ ಕೇಳಿಕೊಂಡಿರುತ್ತೇನೆ. ಆ ರೀತಿ ಕೇಳಿರುವ ದಿನ, ವರ್ಷ ನನಗೆ ನೆನಪಿಲ್ಲ. 5 ನೇ ಪ್ರತಿವಾದಿಯ ಬಳಿ ಕ್ರಯಪತ್ರವನ್ನು ರದ್ದುಪಡಿಸುವಂತೆ ನಾನು ಯಾವತ್ತೂ ಕೇಳಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯಿಂದ ದುರ್ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**3** ನೇ ಪ್ರತಿವಾದಿ ಪರ ವಕೀಲರ ಪಾಟೀ ಸವಾಲಿಗೆ ಪ್ರಕರಣವನ್ನು **3.00** ಗಂಟೆಗೆ ಕರೆಯಲಾಗುವುದು **.**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.